ಕರ್ನಾಟಕ ಸರ್ಕಾರ

# ತಹಶೀಲ್ದಾರರ ನ್ಯಾಯಾಲಯ ಹೂವಿನಹಡಗಲಿ

ಸಂ.ಕಂ/ಪಹಣಿ/ವಿವಾದ/70/2014-15 ದಿನಾಂಕ: 26-05-2016

ಉಪಸ್ಥಿತರು : ಹೆಚ್.ವಿಶ್ವನಾಥ, ತಹಶೀಲ್ದಾರರು,

| ವಾದಿಗಳು | ಪ್ರತಿವಾದಿಗಳು / ಎದುರುದಾರರು |
|---|---|
| **ಶ್ರೀ.ಹಕ್ಕಂಡಿ ಬಸಪ್ಪ ತಂದೆ ಲೇಟ್ ಶೇಖರಪ್ಪ ಮುದೇನೂರು** | **ಹಕ್ಕಂಡಿ ಮಹಾದೇವ ತಂದೆ ಬಸಪ್ಪ** |

**ದಾವಾ ಜಮೀನಿನ ವಿವರ**

| ಗ್ರಾಮ | ಸರ್ವೇ ನಂಬರ್ | ವಿಸ್ತೀರ್ಣ (ಎಕರೆ.ಸೆಂಟ್ಸ್) |
|---|---|---|
| ಮುದೇನೂರ | 46/b | 3.39 |

**ಪ್ರಸ್ತಾವನೆ :**

ಮೇಲಿನ ದಾವಾ ಜಮೀನಿಗೆ ಸಂಬಂದಿಸಿದಂತೆ ಶ್ರೀ ಹಕ್ಕಂಡಿ ಬಸಪ್ಪ ತಂದೆ ಲೇಟ್ ಶೇಖರಪ್ಪ ಇವರು ದಿನಾಂಕ 27/11/2013 ರಂದು ವಂಶವೃಕ್ಷ ಹಾಗು ಮರಣ ಸಮರ್ಥನ ಪತ್ರ ಹಾಗು ಗುರುತಿನ ಚೀಟಿ ಲಗತ್ತಿಸಿ ಅರ್ಜಿ ಸಲ್ಲಿಸಿದ್ದು ತಮ್ಮ ಹೆಂಡತಿ ಶ್ರೀಮತಿ ಸುಮಂಗಳಮ್ಮ ಎಂಬುವರು ದಿನಾಂಕ 09/09/2013 ರಂದು ಮರಣ ಹೊಂದಿದ್ದು ಅವರ ಹೆಸರಿನಲ್ಲಿರುವ ದಾವಾ ಜಮೀನನ್ನು ಪೌತಿ ಪಟ್ಟಾ ಮಾಡಲು ಕೋರಿರುತ್ತಾರೆ.ಈ ಮೇರೆಗೆ ಎಂ ಆರ್ ಸಂಖ್ಯೆ ಹೆಚ್29/2013-14 ರಲ್ಲಿ ಪ್ರಕರಣ ದಾಖಲಿಸಿಕೊಂಡು ನಮೂನೆ 21 ನೋಟೀಸನ್ನು ಜಾರಿ ಮಾಡಿ ಪ್ರಚುರಪಡಿಸಿರುತ್ತದೆ.ನೋಟೀಸು ಪ್ರಚುರಪಡಿಸಿದ ನಿಗದಿತ ಅವದಿಯೊಳಗೆ ಶ್ರೀ ಹಕ್ಕಂಡಿ ಮಹಾದೇವ ತಂದೆ ಬಸಪ್ಪ ಇವರು ತಕರಾರು ಸಲ್ಲಿಸಿರುತ್ತಾರೆ.ಕಾರಣ ಕಂದಾಯ ನೀರೀಕ್ಷಕರು ಹಡಗಲಿ ಇವರು ಪ್ರಕರಣವನ್ನು ಮುಂದಿನ ಕ್ರಮಕ್ಕಾಗಿ ಸಲ್ಲಿಸಿರುತ್ತಾರೆ.

ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ, ಕರ್ನಾಟಕ ಭೂಕಂದಾಯ ಕಾಯ್ದೆ 1964 ಕಲಂ 129ರ ಅನ್ವಯ ನೈಸರ್ಗಿಕ ನ್ಯಾಯ ದೃಷ್ಟಿಯಿಂದ ವಾದಿಗಳಿಗೆ ಕೇಳಿಕೊಳ್ಳಲು ಅವಕಾಶ ನೀಡಿ, ದಿನಾಂಕ 19/01/2015 ರಂದು ವಿಚಾರಣೆಗೆ ಹಾಜರಾಗಲು ನೋಟೀಸು ನೀಡಿ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಿ ದಿನಾಂಕ09/07/2015 ಕ್ಕೆ ಅಂತಿಮಗೊಳಿಸಲಾಯಿತು.ಈ ಪ್ರಕರಣಕ್ಕೆ ಸಂಬಂದಿಸಿದಂತೆ ಅರ್ಜಿದಾರರಾದ ಹಕ್ಕಂಡಿ ಬಸಪ್ಪ ತಂದೆ ಲೇಟ್ ಶೇಖರಪ್ಪ ಇವರು ವಿಚಾರಣೆಗೆ ಹಾಜರಾಗದ ಕಾರಣ ನೊಂದಾಯಿತ ಅಂಚೆ ಮೂಲಕ ನೋಟೀಸು ನೀಡಿದ್ದು,ಸದರಿ ನೋಟಿಸುಗಳು ಅಂಚೆ ಇಲಾಖೆಯಿಂದ ಜಾರಿ ಆಗದೆ ವಾಪಾಸ್ಸು ಬಂದಿರುತ್ತವೆ.

ಪ್ರತಿವಾದಿ ಶ್ರೀ ಹಕ್ಕಂಡಿ ಮಹಾದೇವ ಇವರು ವಿಚಾರಣೆಗೆ ಹಾಜರಾಗಿ ನೊಂದಾಯಿತ ದಸ್ತಾವೇಜು ಸಂಖ್ಯೆ 370/85-86 ದಿನಾಂಕ 12/08/1985 ಸಲ್ಲಿಸಿ ದಾವಾ ಜಮೀನನ್ನು ತಮ್ಮ ಹೆಸರಿಗೆ ನೊಂದಾಯಿಸಿದ್ದು ಆ ಸಮಯದಲ್ಲಿ ತಾವು ಮೈನರಾದ ಕಾರಣ ತಮ್ಮ ತಾಯಿ ಸುಮಂಗಳಮ್ಮ ಇವರನ್ನು ನಿಗೇವಾನಿ ಎಂದು ನೇಮಕ ಮಾಡಿರುತ್ತಾರೆ.ಆದರೆ ಪಹಣಿ ದಾಖಲೆಯಲ್ಲಿ ನನ್ನ ಹೆಸರು ನಮೂದು ಆಗದೆ ಕೇವಲ ನಮ್ಮ ತಾಯಿಯ ಹೆಸರು ನಮೂದು ಆಗಿರುತ್ತದೆ ಕಾರಣ ಅವರ ತಂದೆಯ ಅರ್ಜಿಯನ್ನು ತಿರಸ್ಕರಿಸಲು ಕೋರಿರುತ್ತಾರೆ.ದಾಖಲೆಗಳನ್ನು ಪರಿಶೀಲಿಸಲಾಗಿ ಸದರಿ ಜಮೀನು ಮೇಲಿನ ನೊಂದಾಯಿತ ದಸ್ತಾವೇಜು ಪ್ರಕಾರ ಪ್ರತಿವಾದಿ ಹೆಸರಿನಲ್ಲಿ ಖರೀದಿ ವ್ಯವಹಾರವಾಗಿರುವುದು ದೃಡಪಟ್ಟಿರುವ ಕಾರಣ ಈ ಕೆಳಕಂಡ

## ಆದೇಶ

ಪ್ರಕರಣದ ಹಿನ್ನೆಲೆ, ವಾಸ್ತವಾಂಶ ಹಾಗು ದಾಖಲೆಗಳನ್ವಯ ಶ್ರೀ ಹಕ್ಕಂಡಿ ಬಸಪ್ಪ ತಂದೆ ಲೇಟ್ ಶೇಖರಪ್ಪ ಇವರು ಕೆಳಕಂಡ ದಾವಾ ಜಮೀನುಗಳ ಬಗ್ಗೆ ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸಿ ಆದೇಶಿಸಿದೆ.

| ಗ್ರಾಮ | ಸರ್ವೇ ನಂಬರ್ | ವಿಸ್ತೀರ್ಣ (ಎಕರೆ.ಸೆಂಟ್ಸ್) |
|---|---|---|
| ಮುದೇನೂರ | 46/b | 3.39 |

ಈ ಆದೇಶವನ್ನು ಬೆರಳಚ್ಚುಮಾಡಿಸಿ, ದಿನಾಂಕ 26–05–2016ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

26/5/16

**ತಹಶೀಲ್ದಾರರು**

**ಹಡಗಲಿ.**

ಪ್ರತಿಗಳನ್ನು :

1) ವಾದಿ ಮತ್ತು ಪ್ರತಿವಾದಿಗಳಿಗೆ ಹಾಗೂ ಅವರ ಪರ ನ್ಯಾಯವಾದಿಗಳಿಗೆ.

2) ಭೂಮಿ ಕೇಂದ್ರಕ್ಕೆ ಸೂಕ್ತ ಕ್ರಮಕ್ಕಾಗಿ.